ಗುರು ವೃತ್ತದೊಳಗಡೆ ತಿರುಗುತ್ತ ಭಜನೆಯ ಹಾಡನ್ನು ಶುರು ಮಾಡುತ್ತಾನೆ. ಸುತ್ತ ನಿಂತ ಭಜನೆ ಕಲಿಯುತ್ತಿರುವವರು ಗುರುಗಳು ಹೇಳಿದಂತೆ ಲಯಬದ್ಧವಾಗಿ ನಾಟ್ಯವಾಡುತ್ತ ದುಂಡಗೆ ವಲಯಾಕಾರದಲ್ಲಿ ತಿರುಗುತ್ತಿರುತ್ತಾರೆ.

ರಾತ್ರಿ ಹತ್ತರವರೆಗೆ ಭಜನೆ ಕಲಿಸಿದ ಗುರು ತನ್ನ ಬಟ್ಟೆ ಬರೆ, ಗೆಜ್ಜೆಗಳನ್ನು ದೇವಾಲಯದ ಒಂದು ಮೂಲೆಯಲ್ಲಿ ಇಡುತ್ತಾನೆ. ಹಾಗೆಯೇ ವಾದ್ಯಗಾರನು ಕೂಡ ಮದ್ದಲೆಯನ್ನು ಅಲ್ಲೇ ಇಡುತ್ತಾನೆ. ಮತ್ತೆ ಇಬ್ಬರು ಬೈಕಿನಲ್ಲಿ ತಮ್ಮ ಊರಿಗೆ ತೆರಳುತ್ತಾರೆ. ಹೀಗೆಯೇ ದಿನಗಳು ಕಳೆಯುತ್ತಿರಲು ಒಂದು ದಿನ ನಡುರಾತ್ರಿಯಲ್ಲಿ ಇದ್ದಕ್ಕಿದ್ದ ಹಾಗೆ ಲಯಬದ್ಧವಾಗಿ ಮದ್ದಲೆಯ ಸದ್ದು ಕೇಳಿಸತೊಡಗಿತು. ಎಲ್ಲರೂ ಬೆಚ್ಚು ಬಿದ್ದು ಎಚ್ಚರವಾದರು. 40 ವರ್ಷಕ್ಕೂ ಹೆಚ್ಚಿನ ವಯಸ್ಸಿನವರಿಗೆ ಅದು ಚಿರಪರಿಚಿತವಾದ ಸದ್ದು. ಅದರೊಂದಿಗೆ ಹಾಡೂ ಕೇಳಿಸುತ್ತಿದೆ. ಮನುಷ್ಯ ಹಾಡಿದಂತೆಯೇ ಇದ್ದ ಆ ಚಿರಪರಿಚಿತವಾದ ಮದ್ದಲೆಯ ಮೊಳಗು ಯಾರದು? ಇನ್ನಾರದು, ಎರಡು ದಶಕಗಳ ಹಿಂದೆ ತೀರಿಕೊಂಡ ಸುಬ್ಬನದು. ಒಂದು ಕಾಲದಲ್ಲಿ ಭಜನೆಗೆ ಮದ್ದಲೆ ನುಡಿಸುತ್ತಿದ್ದವನು ಸುಬ್ಬನೇ. ಕಿವಿಗಳಿಗೆ ಹಿತವಾಗುವಂತೆ ನುಡಿಸುತ್ತಿದ್ದ.

ಹಿರಿಯರು ಕಿರಿಯರೆಲ್ಲರೂ ದೇವಾಲಯದತ್ತ ಧಾವಿಸಿದರು. ಹುಚ್ಚ ಪದ್ಮಾಸನದಲ್ಲಿ ಕುಳಿತು ನೆತ್ತಿಯ ಮೇಲೆ ಪೊದೆಯಂತೆ ಬೆಳೆದು ಜೋತಾಡುತ್ತಿದ್ದ ಜುಟ್ಟು ಅತ್ತ ಇತ್ತ ತೊನೆದಾಡುತ್ತಿರಲು ಹಲ್ಲು ಬಿಗಿದು ಮದ್ದಲೆ ನುಡಿಸುತ್ತಿದ್ದಾನೆ. ಎರಡು ಭಜನೆ ಹಾಡುಗಳನ್ನು ಮೈಮರೆತು ಕೇಳಿ ಎಲ್ಲರೂ ಪರವಶರಾದರು. ಅಷ್ಟರಲ್ಲಿ ಕುಲದೊಡೆಯ ಎಚ್ಚೆತ್ತುಕೊಂಡ.

'ಏಯ್... ನಿಲ್ಲಿಸು' ಜೋರಾಗಿ ಅರಚಿದ. ಮದಲೆಯ ಸದ್ದು ಅಡಗಿತು.

'ಯಾರು ನೀನು? ಸತ್ತು ಹೋದ ಸುಬ್ಬ ನಿನ್ನ ಮೈಮೇಲೆ ಬಂದಿದ್ದಾನಾ?'

ಮತ್ತೆ ಮದ್ದಲೆಯ ಸದ್ದಿ ನಿಂದಲೇ ಉತ್ತರಿಸಿದ ಹುಚ್ಚ, 'ನಾನೇನು ಸತ್ತಿಲ್ಲ, ನಾನೇ ಸುಬ್ಬ'

'ನಿಜವಾಗಲೂ?' ಎನ್ನುತ್ತಾ ಕುಲದೊಡೆಯ ನಿಬ್ಬೆರಗಾದ. ದೆವ್ವಗಳೆಂದರೆ ಆ ಊರಿನಲ್ಲಿ ಎಲ್ಲರಿಗೂ ಭಯವೇ. 20 ವರ್ಷಗಳ ಹಿಂದೆ ಸತ್ತ ಸುಬ್ಬ ಈಗ ಬದುಕಿ ಬರುವುದು ಎಂದರೆ ಏನು ಅರ್ಥ? ಇವನು ಖಚಿತವಾಗಿ ದೆವ್ವವೇ ಅಂದುಕೊಂಡರು ಎಲ್ಲರೂ.

ಪ್ರತಿ ವರ್ಷ ಮೀನಿನ ಬೇಟೆ ಇಲ್ಲದ ಬಿಡುವಿನ ಕಾಲದಲ್ಲಿ ಆ ಊರಿಗೆ ಭಜನೆಯ ಗುರುಗಳನ್ನು ಕರೆಸಿಕೊಂಡು ಹಳ್ಳಿಯವರೆಲ್ಲ ಭಜನೆ ಕಲಿಯುವುದು ಸರಿಯಷ್ಟೇ. ಅವರ ಆ ಭಜನೆಯ ಓಘದ ಲಯ ವಿನ್ಯಾಸ ಅವರಿಗೆ ಸ್ಪಷ್ಟವಾಗಿ ಅರ್ಥವಾಗುತ್ತದೆ.

'ಹಾಗಾದರೆ ನನ್ನ ಕಥೆ ಕೇಳಿ' ಎನ್ನುತ್ತಾ ಮದ್ದಲೆಯ ಸದ್ದಿನೊಂದಿಗೇ ಹೇಳತೊಡಗಿದ ಸುಬ್ಬ.

20 ವರ್ಷಗಳ ಹಿಂದೆ ಅದೇ ಗ್ರಾಮವಾಸಿಯಾದ ಸುಬ್ಬ ಮೀನು ಹುಡುಕುತ್ತಾ ಕಡಲಿನಲ್ಲಿ ಬಹಳ ದೂರ ಸಾಗಿದ. ಅವನು ಈ ಲೋಕಕ್ಕೆ ಬರುವ ವೇಳೆಗೆ ಹೊತ್ತು ಮುಳುಗುತ್ತಿದೆ. ಥಟ್ಟನೆ ದೋಣಿಯನ್ನು ತಿರುಗಿಸಿ ತೀರದ ಕಡೆಗೆ ಹೊರಟ. ಆದರೆ ಗಾಳಿಯ ಬೀಸು ಬದಲಾಯಿತು. ಚಂಡಮಾರುತ ಬೀಸುವ ಸೂಚನೆಯಂತೆ 50 ಕಿಲೋ ಮೀಟರುಗಳ ವೇಗದಲ್ಲಿ ಆತನ ವಿರುದ್ಧ ದಿಕ್ಕಿಗೆ ಗಾಳಿ ರಭಸವಾಗಿ ಬೀಸತೊಡಗಿತು. ಕೈಯಲ್ಲಿದ್ದ ಹುಟ್ಟು ಎಷ್ಟು ಮಾತ್ರಕ್ಕೂ ಪ್ರಯೋಜನಕ್ಕೆ ಬರಲಿಲ್ಲ.

ಆ ಗಾಳಿಯ ವೇಗಕ್ಕೆ ಅದು ಬೀಸುತ್ತಿದ್ದ ದಿಕ್ಕಿಗೆ ಇಡೀ ರಾತ್ರಿ ಆತ ಸಾಗಬೇಕಾಯಿತು. ಬೆಳಗಾಗುವ ವೇಳೆಗೆ ಕಡಲಿನಲ್ಲಿ ತುಂಬಾ ದೂರ ಹೋಗಿಬಿಟ್ಟಿದ್ದ. ಸೂರ್ಯೋದಯವಾಯಿತು. ಸದ್ಯಕ್ಕೆ ತಾನು ಎಲ್ಲಿದ್ದಾನೋ ತಿಳಿಯದಾಯಿತು. ಕಡಲಿನ ನಡುವೆ ದೂರದಲ್ಲಿ ಒತ್ತಾಗಿ ಬೆಳೆದ ಗಿಡಗಳಿದ್ದು ಅದೊಂದು ಸಣ್ಣ ದ್ವೀಪದಂತೆ ಕಾಣಿಸಿತು. ಪ್ರಯತ್ನಪಟ್ಟು ಅಲ್ಲಿಗೆ ಸೇರಿಕೊಂಡ.

ಆ ದ್ವೀಪ ಒತ್ತಾದ ದೊಡ್ಡ ದೊಡ್ಡ ಮರ-ಗಿಡಗಳಿಂದ ತುಂಬಿ ಹಸಿರಾಗಿದೆ. ಅದು ಯಾವ ಪ್ರಾಂತ್ಯವೋ ತಿಳಿಯದು. ಅಲ್ಲೆಲ್ಲಾ ಸುತ್ತಾಡಿದ. ಅದರ ನಡುವೆ ಆ ದಿಕ್ಕಿನಿಂದ ಈ ದಿಕ್ಕಿಗೆ ಈ ದಿಕ್ಕಿನಿಂದ ಆ ದಿಕ್ಕಿಗೆ ಅಡ್ಡಡ್ಡ ಅಡ್ಡಾಡಿದ. ಅದು ಸುಮಾರು ಒಂದು ಮೈಲಿನಷ್ಟು ಸುತ್ತಳತೆಯ ಗಾತ್ರದಲ್ಲಿದೆ. ಅದರ ತುದಿಯಲ್ಲಿ ನಿಂತು ತನ್ನ ಊರಿಗೆ ಅದು ಎಷ್ಟು ದೂರದಲ್ಲಿದೆಯೋ ಅಂದಾಜು ಮಾಡಲು ಆಗಲಿಲ್ಲ.

ಪ್ರತಿದಿನ ತೆಪ್ಪದ ಮೇಲೆ ಕುಳಿತು ಕೆಲವು ಫರ್ಲಾಂಗುಗಳ ದೂರ ಹೋಗುತ್ತಿದ್ದ. ಹತ್ತಿರದಲ್ಲಿ